

ಡಾ.ವಿನೋದ ಛೆಬ್ಬಿ

ದಾಂಪತ್ಯದ ಒಂದು ಸಮಸ್ಯೆಯ ಪರಿಹಾರವು ಇನ್ನೊಂದು ಸಮಸ್ಯೆಗೆ ದಾರಿಯಾಗಬಲ್ಲುದು!

# 105: ಸುಧಾರಣೆಯ ಅಡ್ಡಪರಿಣಾಮ

ಅಂಗದ-ಅಮಲಾ ದಂಪತಿಯ ಚಿಕಿತ್ಸೆ ನಡೆದಿದೆ. ಅಂಗದನು ಜವಾಬ್ದಾರಿಯ ಹೆಸರಿನಲ್ಲಿ ಕಾಮಾಸಕ್ತಿಯ ಸ್ವಚ್ಛಂದತೆಯನ್ನು ಕಳೆದುಕೊಂಡಿದ್ದಾನಷ್ಟೆ? ಅವನು ತನ್ನ ಸಮಸ್ಯೆಯಿಂದ ಹೊರಬಂದರೆ ಫಲಶ್ರುತಿ ಸುಖಕರವಾಗಿರುತ್ತದೆ ಎಂದು ಅಮಲಾ ತಪ್ಪು ತಿಳಿದಿದ್ದಾಳೆ ಎಂದು ಹೋದಸಲ ಮಾತಾಡಿಕೊಂಡೆವು. ಈಗ ಅಮಲಾಳ ಲೆಕ್ಕಾಚಾರ ಎಲ್ಲಿ ತಪ್ಪಿದೆ ಎಂದು ನೋಡೋಣ.

ನಾನು ಅಮಲಾಳನ್ನು ಉದ್ದೇಶಿಸಿ ಹೇಳಿದೆ: 'ಸುಧಾರಣೆಯ ನಂತರ ಅಂಗದ್ ಸೆಕ್ಸ್‌ನಲ್ಲಿ ಮನಸ್ಸಿಟ್ಟು ಭಾಗವಹಿಸುತ್ತಾರೆ, ಎಂದಿರಿ... ಆಗ ಅವರು ತೋರುವ ಸ್ವಚ್ಛಂದತೆಯು ನಿಮಗೆ ಎಲ್ಲರೀತಿಯಲ್ಲೂ ಇಷ್ಟವಾಗಲಿಕ್ಕಿಲ್ಲ ಎಂದು ನನಗೆ ಅನ್ನಿಸುತ್ತದೆ.' ಅವಳಿಗೆ ಅರ್ಥವಾಗಲಿಲ್ಲ. ವಿವರಿಸಿದೆ. 'ಇದು ಹೇಗೆಂದರೆ, ನಿಮ್ಮ ಮಗ ತುಂಟ ಎಂದು ಹೆಮ್ಮೆಪಟ್ಟುಕೊಳ್ಳುತ್ತೀರಿ. ಹಾಗೆಂದು ಅವನ ಎಲ್ಲ ತುಂಟತನದ ಕೃತ್ಯಗಳು ನಿಮಗಿಷ್ಟವಾಗಲಿಕ್ಕಿಲ್ಲ, ಅಲ್ಲವೆ? ಹಾಗೆಯೆ, ಅಂಗದ್ ಅವರು ಕಾಮದ ಅಭಿವ್ಯಕ್ತಿಯಲ್ಲಿ ಸ್ವಚ್ಛಂದತೆಯನ್ನು ಒಳಗೂಡಿಸಲು ಕಲಿತಾಗ ತಮಗೆ ಇಷ್ಟವಾದ ದಿಕ್ಕಿನಲ್ಲಿ ಮಾತ್ರ ಮನಸ್ಸನ್ನು ಹರಿಬಿಡಬಹುದು. ಉದಾಹರಣೆಗೆ, ಮುನ್ನಲಿವು ನಿಧಾನವಾಗಿ ನಡೆಯಲಿ ಎಂದು ನೀವು ಬಯಸುತ್ತಿರುವಾಗ ಅವರು ಸಂಭೋಗಕ್ಕೇ ಹಾತೊರೆಯಬಹುದು. ನೀವಿನ್ನೂ ತಯಾರಿಲ್ಲದಿರುವಾಗ ಅವರು ನಿಮ್ಮೊಳಗೆ ಸೇರಲು ಯತ್ನಿಸಬಹುದು. ಅಥವಾ ನಿಮಗೆ ಕಾಮತೃಪ್ತಿ ಮುಟ್ಟಲು ಕಾಮಕ್ರಿಯೆಯು ನಿಧಾನವಾಗಿ ಶುರುವಾಗಿ ಸುಂಟರಗಾಳಿಯಂತೆ ಸುರುಳಿ ಸುತ್ತುತ್ತ ಮೇಲೇಳಬೇಕು ಎಂದು ಬಯಸುತ್ತಿರುವಾಗ ಅವರು ಸ್ವೇಚ್ಛೆಯಿಂದ ಉನ್ಮತ್ತರಾಗಿ ಬಿರುಗಾಳಿಯ ರಭಸದಿಂದ ಮುಗಿಬೀಳುತ್ತಾರೆ ಎಂದಿಟ್ಟುಕೊಳ್ಳಿ. ಅವರಿಗೆ ಅದು 'ಅತ್ಯದ್ಭುತ' ಎನ್ನಿಸಿದರೂ ನಿಮಗೆ 'ಅವಸರ' ಅನ್ನಿಸಬಹುದು. ನಡುರಾತ್ರಿ ನೀವು ಗಾಢನಿದ್ರೆಯಲ್ಲಿ ಇರುವಾಗ ಅವರಿಗೆ ಕಾಮದಾಸೆಯಿಂದ ನಿಮ್ಮ ಮೈಮೇಲೆ ಬರಬಹುದು. ಆಗ ನಿಮಗೆ ಕಾಮಸುಖ ಒತ್ತಟ್ಟಿಗಿರಲಿ, ನಿದ್ರೆಯೇ ಹಾಳಾಗಬಹುದು. ನಿಮಗಿದೆಲ್ಲ ಹೇಗಿರುತ್ತದೆ?'

ಅಮಲಾಳ ಮುಖದಲ್ಲಿ ಗೊಂದಲ ಮೂಡಿತು. ಆಕೆ ಇಷ್ಟೆಲ್ಲ ಯೋಚಿಸಿರಲಿಲ್ಲ. ಸಾವರಿಸಿಕೊಂಡು ಅಂಗದನ ಕಡೆಗೆ ಕಣ್ಣುಹಾಯಿಸಿ ಹೇಳಿದಳು: 'ಸೆಕ್ಸ್‌ನಲ್ಲಿ ಏನು ನಡೆದರೂ ಒಂಥರಾ ಸುಖವಾಗಿಯೇ ಇರುತ್ತದೆ... ಅಲ್ಲವೆ? ಆಲ್ ಈಸ್ ಫೇರ್ ಇನ್ ಲವ್ ಎಂಡ್ ವಾರ್.' ಹಾಗೆಂದು ನಗು ಚೆಲ್ಲಿದರೂ ಆಕೆಯ ಸ್ವರದಲ್ಲಿ ಮುಂಚೆಯಿದ್ದ ಕೌತುಕತೆಯ ಬದಲು ಹೊಸ ಅನಿಶ್ಚಿತತೆಯಿಂದ ಉಂಟಾದ ಆತಂಕ ಎದ್ದುಕಾಣುತ್ತಿತ್ತು.

ನಾನು ಮುಂದುವರಿದೆ. 'ಅಷ್ಟೇ ಅಲ್ಲ, ಅಂಗದ್ ಅವರ ನೂತನ ಸ್ವಚ್ಛಂದತೆಯ ಫಲಶ್ರುತಿಯು ನಿಮ್ಮಿಬ್ಬರ ನಿತ್ಯದ ಬದುಕಿನಲ್ಲೂ ಇಣುಕುತ್ತ ಅಡ್ಡಿಯಾಗಬಹುದು.' ಇದು ಹೇಗೆಂದು ವಿವರಿಸಿದೆ.

ಅಂಗದ ಹೆಂಡತಿಯೊಂದಿಗೆ ತೋರುವ ಸಹಕಾರದ ಹಿಂದೆ ವಿಧೇಯತೆಯ ಅನುಸರಣೆ ಎಷ್ಟಿದೆ ಎಂದರೆ ಅವನು ಎಷ್ಟೋ ಸಲ ತನ್ನ ವೈಯಕ್ತಿಕ ಅನನುಕೂಲತೆಯನ್ನು ಅಲಕ್ಷಿಸಿ ಆಕೆಯ ಬೇಡಿಕೆಗೆ ಸ್ಪಂದಿಸಿದ್ದಾನೆ (ಉದಾ. ತಾನು ನಿದ್ದೆಗೆಟ್ಟರೂ ಹೆಂಡತಿಯು ಕೈಗೊಳ್ಳುವ ಶಸ್ತ್ರಚಿಕಿತ್ಸೆಯಲ್ಲಿ ಸಹಾಯಕನಾಗುವುದು). ಈಗ ಕಾಮಕೂಟದಲ್ಲಿ ಹೊಸದಾಗಿ ಕಂಡುಕೊಂಡ ಸ್ವಚ್ಛಂದತೆಯಿಂದ ಅವನೊಳಗೆ ಎಂದಿಲ್ಲದ ಆತ್ಮವಿಶ್ವಾಸದ ಸೆಲೆ ಹುಟ್ಟುತ್ತದಲ್ಲವೆ? ಇದು ಅವನ ಇನ್ನಿತರ ಕ್ಷೇತ್ರಗಳಲ್ಲೂ ಉಕ್ಕಿಹರಿಯುತ್ತದೆ. ಸ್ವಚ್ಛಂದತೆಯ ರುಚಿಕಂಡ ಅವನು ವಿಧೇಯತೆಯನ್ನು ಬಿಟ್ಟು ಸ್ವಾಯತ್ತತೆಯ ಕಡೆಗೆ ವಾಲುತ್ತಾನೆ. ಪರಿಣಾಮ? ಅವನು ತನ್ನ ಮನಸ್ಸಿಗೆ ಒಪ್ಪದ ಜವಾಬ್ದಾರಿಯನ್ನು ಹೊರಲು ನಿರಾಕರಿಸಬಹುದು. ಉದಾಹರಣೆಗೆ, ಮುಂಜಾನೆ ಮಕ್ಕಳನ್ನು ಶಾಲೆಗೆ ಸಿದ್ಧಗೊಳಿಸುವುದರ ಬದಲು ಆರಾಮವಾಗಿ ಮಲಗುವುದನ್ನು ಇಷ್ಟಪಡಬಹುದು. ಅಮಲಾಳ ಶಸ್ತ್ರಚಿಕಿತ್ಸೆಗಳಲ್ಲಿ ಸಹಾಯಕನಾಗಲು ಒಪ್ಪದಿರಬಹುದು. ಆಕೆ ಹೊರಹೋಗಲು ಕರೆದಾಗಲೆಲ್ಲ ಕಾರು ಚಾಲಕನ ಪಾತ್ರವನ್ನು ಒಲ್ಲೆಯೆನ್ನುತ್ತ, 'ನೀನೇ ಕಾರ್ ಡ್ರೈವ್ ಮಾಡಿಕೊಂಡು ಹೋಗು, ನಾನು ಟೀವಿಯಲ್ಲಿ ಮ್ಯಾಚ್ ನೋಡುತ್ತಿದ್ದೇನೆ' ಎಂದು ತನಗೇ ಪ್ರಾಮುಖ್ಯತೆ ಕೊಟ್ಟುಕೊಳ್ಳಬಹುದು. ಆಗ ಅಮಲಾ ಇದನ್ನು ಸರಿಯಾಗಿ ಅರ್ಥೈಸಿಕೊಳ್ಳದೆ, ಅಂಗದ ಸ್ವಾರ್ಥಿಯಾಗಿದ್ದಾನೆ ಎಂದುಕೊಳ್ಳಬಹುದು. ಇಷ್ಟು ವರ್ಷದ ಬಲಗೈ ಬಂಟ ಅವಳನ್ನು ಕೈಬಿಟ್ಟಂತಾಗಿ ಅವರ ಪ್ರೀತಿಯ ಬೆಸುಗೆ ಬಿರುಕು ಬಿಡಬಹುದು. ಮನಸ್ತಾಪ, ಜಗಳಕ್ಕೆ ಹಾದಿಯಾಗಬಹುದು. ಅಮಲಾ ಇದೆಲ್ಲ ಯೋಚಿಸಿದ್ದಾಳೆಯೆ?

ಈಗ ಅಮಲಾ ನಿಜವಾಗಿಯೂ ಗೊಂದಲದಲ್ಲಿ ಬಿದ್ದಳು! ಔಷಧಿಗಳಿಗೆ ಅಲ್ಲದೆ ನಡವಳಿಕೆಯಲ್ಲಿಯ ಸುಧಾರಣೆಗೂ ಅಡ್ಡಪರಿಣಾಮಗಳು ಇರುತ್ತವೆ ಎಂದು ಆಕೆ ಊಹಿಸಿಯೂ ಇರಲಿಲ್ಲ. ಇದೆಲ್ಲ ಹೇಗಾದರೂ ಸಾಧ್ಯ ಎಂದು ದಿಗ್ಭ್ರಮೆಗೊಂಡಳು. ಅಥವಾ ಇದು ಕೇವಲ ನನ್ನ ಕಲ್ಪನೆಯೋ? ಮನವರಿಕೆಯಾಗಲು ದಾಂಪತ್ಯದ ತಳಹದಿಯಾದ ಸಿದ್ಧಾಂತವನ್ನು ಮುಂದಿಟ್ಟೆ.

ವ್ಯವಸ್ಥೆ ಹಾಗೂ ಸಮಸ್ಥಿತಿ: ಇಬ್ಬರು (ಉದಾ. ದಾಂಪತ್ಯ, ಸ್ನೇಹ) ಅಥವಾ ಇಬ್ಬರಿಗಿಂತ ಹೆಚ್ಚು ಪರಸ್ಪರ ಸಂಬಂಧಪಡುವ ವ್ಯಕ್ತಿಗಳು (ಉದಾ. ಕುಟುಂಬ, ಕಾರ್ಖಾನೆ) ಒಟ್ಟಿಗಿರುತ್ತಾರಲ್ಲವೆ? ಆಗ ಅವರನ್ನು ಒಳಗೊಂಡು ಒಂದು 'ವ್ಯವಸ್ಥೆ' (system) ಹುಟ್ಟುತ್ತದೆ. ಒಂದು ವ್ಯವಸ್ಥೆಯಲ್ಲಿರುವ ಸದಸ್ಯರು ನಾನಾ ರೀತಿಗಳಲ್ಲಿ ಪರಸ್ಪರ ಪೂರಕವಾಗಿ ಅಥವಾ ವಿರೋಧವಾಗಿ ವರ್ತಿಸುತ್ತ ಒಬ್ಬರ ಮೇಲೊಬ್ಬರು ಪ್ರಭಾವ ಬೀರುತ್ತ ಅಂತಿಮವಾಗಿ, 'ನಾವು ಪಡೆದುಕೊಳ್ಳುವುದು ಇಷ್ಟೆ!' ಎನ್ನುವ ಸಮಸ್ಥಿತಿಯ ಸ್ಥಿರತೆಗೆ ತಲುಪುತ್ತಾರೆ. ಹೀಗೆ ದಾಂಪತ್ಯದಲ್ಲೂ ಸಂಗಾತಿಗಳು ಸಂಬಂಧ ಕಟ್ಟಿಕೊಳ್ಳುವಾಗ ಸರಸ-ವಿರಸ ಆಡುತ್ತ ಶಾರೀರಿಕ, ವ್ಯಾವಹಾರಿಕ, ಭಾವನಾತ್ಮಕವಾಗಿ ಪರಸ್ಪರ ಹತ್ತಿರ-ದೂರವಾಗುವ ಪ್ರಕ್ರಿಯೆಗೆ ಒಳಪಡುತ್ತ, ಅಂತಿಮವಾಗಿ ಸೂಕ್ತ ಸಮಸ್ಥಿತಿಯನ್ನು ಸ್ಥಾಪಿಸಿರುತ್ತಾರೆ. ಈಗ, ಇಬ್ಬರ ಪೈಕಿ ಒಬ್ಬರ ವರ್ತನೆಯಲ್ಲಿ ವ್ಯತ್ಯಾಸ ಆಯಿತು ಎಂದುಕೊಳ್ಳಿ. ಅದು ಸಮಸ್ಥಿತಿಯನ್ನು ಅಲ್ಲಾಡಿಸುತ್ತ ಸಂಗಾತಿಯ ಮೇಲೆ ಪ್ರಭಾವ ಬೀರುತ್ತದೆ. ಆಗ ಸಂಗಾತಿಯು ಮುಂಚಿನಂತೆ ಇರಲು ಸಾಧ್ಯವಾಗದೆ ತಾನೂ ಬದಲಾವಣೆ ಹೊಂದುವ ಅನಿವಾರ್ಯತೆ ಹುಟ್ಟುತ್ತದೆ – ಈ ಬದಲಾವಣೆ ಯಾವಾಗಲೂ ಹಿತಕರ ಎನ್ನುವಂತಿಲ್ಲ. ಒಬ್ಬರಿಗೆ ಪ್ರತಿಯಾಗಿ ಇನ್ನೊಬ್ಬರೂ ಬದಲಾದಾಗ ಮಾತ್ರ ಹೊಸ ಸಮತೋಲನ ಸ್ಥಾಪಿತವಾಗಿ ಮತ್ತೆ ವ್ಯವಸ್ಥೆಗೆ ಸ್ಥಿರತೆ ಬರುತ್ತದೆ. ಬದಲಾಗದಿದ್ದರೆ? ಕಾರ್ಯಕ್ಷಮತೆಯಲ್ಲಿ ಏರುಪೇರಾಗುತ್ತ ದಾಂಪತ್ಯ ನಿಂತೇಹೋಗುತ್ತದೆ!

ಇದನ್ನೆಲ್ಲ ಕೇಳುತ್ತ ಪ್ರತಿಮೆಯಾಗಿದ್ದ ಅಮಲಾ ಬಾಯಿಬಿಟ್ಟಳು. 'ಹಾಗಾದರೆ ಅಂಗದ್ ಸುಧಾರಣೆ ಆದ ಪಕ್ಷದಲ್ಲಿ ಕುಟುಂಬದ ಬ್ಯಾಲೆನ್ಸ್ ಕೆಡುತ್ತದೆ ಎನ್ನುತ್ತೀರಾ?' ನಾನು ಹೇಳಿದೆ: 'ಹಾಗಲ್ಲ. ಇಲ್ಲಿ ಸುಧಾರಣೆ ಎಂದರೇನು? ಬದಲಾಗುವುದು ತಾನೆ? ಅಂಗದ್ ಬದಲಾದರೆ ಮುಂಚಿನ ಸಮಸ್ಥಿತಿಯಲ್ಲಿ ಏರುಪೇರಾಗುತ್ತದೆ. ಆಗ ನೀವು ಅದನ್ನು ಅರ್ಥಮಾಡಿಕೊಂಡು ಅದಕ್ಕೆ ತಕ್ಕಂತೆ ಬದಲಾಗುವ ಒಲವು ತೋರಿದರೆ ಹೊಸ ಸಮಸ್ಥಿತಿ ಉಂಟಾಗುತ್ತದೆ. ಬದಲಾವಣೆ ಎಂದರೆ ಒಂದು ಒಂದು ಸಮಸ್ಥಿತಿ ಬಿಟ್ಟು ಇನ್ನೊಂದು ಸಮಸ್ಥಿತಿ ಹೊಂದಲು ಆಹ್ವಾನವಷ್ಟೆ. ಅದಕ್ಕಾಗಿ ನಿಮಗಿಬ್ಬರಿಗೂ ಈ ಪ್ರಶ್ನೆ: ನೀವಿಬ್ಬರೂ ಮುಂಬರುವ ಬದಲಾವಣೆಗೆ ಹೊಂದಿಕೊಂಡು ಹೊಸ ಸಮಸ್ಥಿತಿಯನ್ನು ಒಪ್ಪಿಕೊಳ್ಳಬಲ್ಲಿರಾ? ಯೋಚಿಸಿ. ಇದರ ಬಗೆಗೆ ಮುಂದಿನ ಭೇಟಿಯಲ್ಲಿ ಚರ್ಚೆಮಾಡೋಣ.' ಎಂದು ಅವರನ್ನು ಬೀಳ್ಕೊಟ್ಟೆ.

ಉಚಿತ ಸಹಾಯವಾಣಿಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: **8050255229** (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: **8494944888** (ಬೆಳಿಗ್ಗೆ 11ರಿಂದ ಸಂಜೆ 5ರ ತನಕ) ಲೇಖಕರ ವಿಳಾಸ: **www.medisex.org**